# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 332

2) ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 29/01/2026

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕವಾಗಿ ಕೆ.ಎಸ್.ಆರ್.ಪಿ. ಘಟಕವನ್ನು ಸ್ಥಾಪಿಸುವ ಪಸ್ತಾವನೆಯನ್ನು ಎರಡನೇ ಬಾರಿಗೆ ಹಣಕಾಸು ಇಲಾಖೆ ತಿರಸ್ಕರಿಸಿದ್ದು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ಇವರಿಂದ ಹಣಕಾಸು ಇಲಾಖೆಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುವಂತೆ ನೀಡಿರುವ ಮನವಿ ಪತ್ರವು ಪ್ರಸ್ತುತ ಯಾವ ಹಂತದಲ್ಲಿದೆ; | ರಾಯಚೂರು ಜಿಲ್ಲೆಯಲ್ಲಿ 13ನೇ ಕೆ.ಎಸ್.ಆರ್.ಪಿ. ಪಡೆಯನ್ನು ಸೃಜಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಆ) | ಹಲವು ವರ್ಷಗಳಿಂದ ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಕೆ.ಎಸ್.ಆರ್.ಪಿ. ಘಟಕವನ್ನು ಸ್ಥಾಪಿಸುವಂತೆ ಮನವಿ ಮಾಡುತ್ತಿರುವುದನ್ನು ಪರಿಗಣಿಸದೆ ನಂತರದಲ್ಲಿ ಪ್ರಸ್ತಾವನೆ ನೀಡಿರುವ ಮೈಸೂರು ಜಿಲ್ಲೆಯಲ್ಲಿ ಮಾತ್ರ ಹೊಸ ಕೆ.ಎಸ್.ಆರ್.ಪಿ. ಘಟಕ ಸ್ಥಾಪನೆಗೆ ಅನುಮತಿ ನೀಡಲು ಕಾರಣವೇನು ಹಾಗೂ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಕೆ.ಎಸ್.ಆರ್.ಪಿ. ಘಟಕವನ್ನು ಸ್ಥಾಪಿಸದೆ ಇರಲು ಕಾರಣವೇನು; (ವಿವರ ನೀಡುವುದು) | ಮೈಸೂರು ಜಿಲ್ಲೆಯಲ್ಲಿ 5ನೇ ಪಡೆ ಕೆ.ಎಸ್.ಆರ್.ಪಿ ಘಟಕವು ಕಾರ್ಯನಿರ್ವಹಿಸುತ್ತಿದ್ದು, ಮೈಸೂರಿನಲ್ಲಿ ನೂತನ ಕೆ.ಎಸ್.ಆರ್.ಪಿ. ಪಡೆಯ ಸೃಜನೆಗೆ ಯಾವುದೇ ಮಂಜೂರಾತಿ ದೊರೆತಿರುವುದಿಲ್ಲ. |
| ಇ) | ಕೆ.ಎಸ್.ಆರ್.ಪಿ. ಘಟಕದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಪುರುಷ ಹಾಗೂ ಮಹಿಳೆಯರಿಗೆ ಹಂಚಿಕೆಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು) | ಕೆ.ಎಸ್.ಆರ್.ಪಿ. ಘಟಕದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಹಂಚಿಕೆಯಾಗಿರುವ ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಪುರುಷ ಹಾಗೂ ಮಹಿಳಾ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ ಸಂ | ಹುದ್ದೆ | ಮಂಜೂರಾತಿ ಬಲ | | ಹಾಲಿ ಬಲ | |
|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ |
| 1 | ಸ್ಪೆಆರ್‌ಪಿಐ | 11 | 1 | 11 | 0 |
| 2 | ಸ್ಪೆಆರ್‌ಎಸ್‌ಐ | 32 | 3 | 30 | 0 |
| 3 | ಸ್ಪೆಎಆರ್ ಎಸ್‌ಐ | 96 | 12 | 85 | 0 |

| | | | | | |
|---|---|---|---|---|---|
| 4 | ಸ್ಪೆಆರ್‌ಹೆಚ್ ಸಿ | 315 | 35 | 210 | 5 |
| 5 | ಸ್ಪೆಆರ್‌ಪಿಸಿ | 614 | 73 | 236 | 0 |
| 6 | ಜಮೇದಾರ್ ಅನುಯಾಯಿ | 35 | 0 | 32 | 0 |
| 7 | ಅನುಯಾಯಿ | 87 | 12 | 30 | 0 |

| | | |
|---|---|---|
| ಈ) | KSRP ಮತ್ತು IRB ಘಟಕಗಳು ಪ್ರತ್ಯೇಕಿಸಿದ್ದರಿಂದ ಕಲ್ಯಾಣ ಕರ್ನಾಟಕದ ಎಷ್ಟು KSRP ಮತ್ತು IRB ಅಧಿಕಾರಿ ಸಿಬ್ಬಂದಿಗಳಿಗೆ ಈಗಾಗಲೇ IRB ಘಟಕಕ್ಕೆ ಪದೋನ್ನತಿ ನೀಡಲಾಗಿದೆ; ಹಾಗೂ ಎಷ್ಟು ಅಧಿಕಾರಿ ಸಿಬ್ಬಂದಿಗಳು ಹೆಚ್ಚುವರಿಯಾಗಿ ಉಳಿದಿದ್ದಾರೆ? | ಮಾನ್ಯ ಕೆ.ಎಸ್.ಎ.ಟಿ.ಯಲ್ಲಿ ದಾಖಲಾದ ಅರ್ಜಿ ಸಂಖ್ಯೆ: 1592-1599/2020 ಮತ್ತು 396-403/2023ರಲ್ಲಿ ದಿನಾಂಕ: 31.10.2023ರಂದು ನೀಡಿದ ಆದೇಶದಲ್ಲಿ ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಘಟಕಗಳಿಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವಂತೆ ತಿಳಿಸಲಾಗಿರುತ್ತದೆ. ಅದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 151(ii) ಪಿಪಿಎ 2025, ದಿನಾಂಕ: 26.12.2025ರಲ್ಲಿ ಐಆರ್‌ಬಿ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸಲಾಗಿರುತ್ತದೆ.<br>ಈ ಹಿನ್ನಲೆಯಲ್ಲಿ ಸಹಾಯಕ ಕಮಾಂಡೆಂಟ್ (ಐಆರ್‌ಬಿ) ವೃಂದಲ್ಲಿ ಭಾರತ ಸಂವಿಧಾನದ ಅನುಚ್ಛೇದ-371(ಜೆ)ರನ್ವಯ ಮಂಜೂರಾತಿ ಹುದ್ದೆಗಳಲ್ಲಿ ಕಲ್ಯಾಣ-ಕರ್ನಾಟಕ ಹುದ್ದೆಗಳನ್ನು ಗುರುತಿಸಲು ಮಾಹಿತಿಯನ್ನು ಒದಗಿಸಲು ಘಟಕಾಧಿಕಾರಿಗಳಿಗೆ ಕೋರಲಾಗಿದ್ದು, ಮುಂದುವರೆದಂತೆ 28 ಸಹಾಯಕ ಕಮಾಂಡೆಂಟ್ (ಐಆರ್‌ಬಿ) ವೃಂದದ ಹುದ್ದೆಗಳು ರಕ್ತವಿದ್ದು, ಅರ್ಹತೆಯ ಮೇರೆಗೆ ಮುಂಬಡ್ತಿ ನೀಡಲು ನಿಯಮಾನುಸಾರ ಕ್ರಮವಹಿಸಲಾಗುತ್ತದೆ.<br>ಐಆರ್‌ಬಿ ಘಟಕಗಳಿಗೆ ಪದೋನ್ನತಿ ಹೊಂದಿರುವ ವಿವಿಧ ವೃಂದದ ಒಟ್ಟಾರೆ 503 ಕೆ.ಎಸ್.ಆರ್.ಪಿ. ಅಧಿಕಾರಿ ಮತ್ತು ಸಿಬ್ಬಂದಿಗಳಿದ್ದು, ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗದ 186 ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕೆ.ಎಸ್.ಆರ್.ಪಿ. ಘಟಕಗಳಲ್ಲಿ ಖಾಲಿ ಇರುವ ಕಲ್ಯಾಣ ಕರ್ನಾಟಕ ಹುದ್ದೆಗಳಿಗೆ ಸರಿದೂಗಿಸಲಾಗುವುದು. |

**ಸಂಖ್ಯೆ: ಹೆಚ್‌ಡಿ 14 ಪಿಓಪಿ 2026**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.